ಬಾಗೇಪಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸಂತೆಯಲ್ಲಿ ಪದಾರ್ಥಗಳನ್ನು ಕೊಳ್ಳುತ್ತಿರುವುದು

783(1289) ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆ, ಬಾಗೇಪಲ್ಲಿ ಮತ ಕ್ಷೇತ್ರ ವ್ಯಾಪ್ತಿಯ ಬಾಗೇಪಲ್ಲಿ ಗುಡಿಬಂಡೆ ತಾಲ್ಲೂಕಿನಾದ್ಯಂತ ಸಂತೆಯಲ್ಲಿ ತರಕಾರಿ, ದವಸ ಧಾನ್ಯಗಳು ಮಾರಾಟವಾಗುತ್ತಿದ್ದು, ಇದರಿಂದ ಈ ಭಾಗದ ಜನತೆಯು ಎ.ಪಿ.ಎಂ.ಸಿ.ಯಲ್ಲಿ ಪದಾರ್ಥಗಳನ್ನು ಕೊಳ್ಳದೇ ಕಾಳಸಂತೆಯಲ್ಲಿಯೇ ಪದಾರ್ಥಗಳನ್ನು ಕೊಂಡುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, ಇದರ ವಿರುದ್ಧ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ 'ಸ್ತ್ರೀ ಶಕ್ತಿ" ಸ್ವಸಹಾಯ ಗುಂಪುಗಳಿಗೆ ರೂಪಿಸಿರುವ ಯೋಜನೆಗಳು

784(1294) ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯದಲ್ಲಿರುವ ಸ್ತ್ರೀಶಕ್ತಿ ಯೋಜನೆಯಡಿ ಸ್ಥಾಪಿತವಾಗಿರುವ ಮಹಿಳಾ ಸ್ವಸಹಾಯ ಗುಂಪುಗಳು ಎಷ್ಟು? (30-6-2002ರವರೆಗೆ) (ಜಿಲ್ಲಾವಾರು ವಿವರ ನೀಡುವುದು).

2) ಇವುಗಳು ಉಳಿತಾಯ ಮಾಡಿರುವ ಹಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು).

3) ಇವುಗಳಿಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರಸರ್ಕಾರದಿಂದ ಬಿಡುಗಡೆಯಾದ ಹಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು)?

4) ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಈ ಸ್ವಸಹಾಯ ಗುಂಪುಗಳಿಗೆ ಸರ್ಕಾರ ಹಾಕಿಕೊಟ್ಟಿರುವ ಯೋಜನೆಗಳ ವಿವರ ನೀಡುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

1) 30-6-2002ರ ಅಂತ್ಯದಂತೆ ಸ್ತ್ರೀಶಕ್ತಿ ಯೋಜನೆಯಡಿ ಒಟ್ಟು 75660 ಮಹಿಳಾ ಸ್ವಸಹಾಯ ಗುಂಪುಗಳು ರಚನೆಯಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ನಮೂದಿಸಿದೆ.

2) ಈ ಗುಂಪುಗಳು ಒಟ್ಟು 7924.82 ಲಕ್ಷ ರೂ.ಗಳನ್ನು ಉಳಿತಾಯ ಮಾಡಿರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.

3) ಸ್ತ್ರೀಶಕ್ತಿ ಯೋಜನೆ ರಾಜ್ಯವಲಯದ ಯೋಜನೆ 2000-01ರ ಹಾಗೂ 2001-02ರ ಸಾಲಿನಲ್ಲಿ ಒಟ್ಟು 2019.82 ಲಕ್ಷ ರೂ.ಗಳನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು